ನಾನು ನಂಬುತ್ತೇನೆ ಕೇವಲ ಆ ಮದನ ಮೋಹನನನ್ನು. 4

5. ಪ್ರೀತಮ್ ಬಸೆ ಪಹಾಡ್ ಪೆ, ಮೈ ಜಮುನಾಕೆ ತೀರ್..
ನನ್ನ ಪ್ರಿಯಕರನು ಪರ್ವತಾಗ್ರದಲ್ಲಿ ನೆಲೆಸಿದ್ದಾನೆ, ನಾನು ಯಮುನಾ ನದಿಯ ತೀರದಲ್ಲಿ;
ಈಗ ಪರಸ್ಪರ ಮಿಲನ ಕಠಿಣ, ಕಾಲುಗಳಿಗೆ ಬಿದ್ದಿವೆ ಶೃಂಖಲೆಗಳು. 1
ನಾನು ಆಗ್ರಾದಲ್ಲಿ ಇರುತ್ತಿದ್ದರೆ, ನನ್ನ ಪ್ರಿಯಕರನು ಪರ್ವತಾಗ್ರದಲ್ಲಿದ್ದರೂ,
ಈ ಶೃಂಖಲೆಗಳನ್ನು ಮುರಿದು, ಉಲ್ಲಾಸದಿಂದ ಇರುತ್ತಿದ್ದೆ ನಾನು ಪ್ರಿಯಕರನ ಜೊತೆಯಲ್ಲಿ. 2

(ಆಧಾರ: **www.brajrasik.org / Vrindavan Today, 'Taj Bibi: Forgotten in Life and Death'**. ಈ ಎರಡು ಜಾಲತಾಣಗಳಲ್ಲಿ ಇರುವ ತಾಜ್ ಬೀಬಿಯ ಕವನಗಳ ಇಂಗ್ಲಿಷ್ ಅನುವಾದಗಳನ್ನು ಆಧರಿಸಿ, ನಾನು ಕನ್ನಡದಲ್ಲಿ ಅನುವಾದಿಸಿದ್ದೇನೆ.)



## ಅಬ್ದುಲ್ ರಹೀಮ್ ಖಾನ್

ರಹೀಮ್ ಎಂದೇ ಜನಪ್ರಿಯನಾದ, ದೆಹಲಿಯಲ್ಲಿ ಜನಿಸಿದ ಪ್ರಸಿದ್ಧ ಕವಿ ಹಾಗೂ ಯೋಧ ರಹೀಮ್ ಖಾನ್ (1556–1627), ಅಕ್ಬರನ ಆಸ್ಥಾನದ 'ನವರತ್ನ'ಗಳಲ್ಲಿ ಒಬ್ಬನಾಗಿದ್ದನು. ಇವನ ತಂದೆ ಬೈರಾಮ್ ಖಾನ್ 14ನೇ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಅಕ್ಬರನ ಪಾಲನೆ–ಪೋಷಣೆ ಮಾಡಿ, ಅವನ ಶತ್ರುಗಳನ್ನು ಮಣಿಸಿ, ಮುಘಲ್ ಸಿಂಹಾಸನದ ಮೇಲೆ ಅಕ್ಬರನನ್ನು ಕೂರಿಸಿದನು. ಗುಜರಾತ್‌ನ ಪಾಟನ್ ನಗರದಲ್ಲಿ ಬೈರಾಮ್ ಖಾನನ ಕೊಲೆಯಾದ ನಂತರ ಅವನ ಮೊದಲ ಪತ್ನಿ ಹಾಗೂ ಐದು ವರ್ಷದ ರಹೀಮನಿಗೆ ಅಕ್ಬರ್ ಆಶ್ರಯ ನೀಡಿ ಅವನನ್ನು ಪೋಷಿಸಿದನು. ಅನಂತರ, ಬೈರಾಮ್ ಖಾನನ ಎರಡನೆಯ ಪತ್ನಿಯನ್ನು ಮದುವೆಯಾದನು; ಈ ಕಾರಣದಿಂದ ರಹೀಮ್ ಅಕ್ಬರನ 'ಮಲ ಮಗ'ನೂ ಆಗಿದ್ದನು. ಕಾಲಕ್ರಮದಲ್ಲಿ ಅಕ್ಬರ್ ಅವನನ್ನು ತನ್ನ ಮಂತ್ರಿಮಂಡಳದಲ್ಲಿ ಸೇರಿಸಿಕೊಂಡದ್ದಲ್ಲದೆ, ತನ್ನ ಸೇನೆಯ ಒಬ್ಬ ಸೇನಾಧಿಪತಿಯನ್ನಾಗಿಯೂ ನೇಮಿಸಿದನು. ರಹೀಮ್ ಗುಜರಾತಿನಲ್ಲಿ ಆಗ ಎದ್ದಿದ್ದ ದಂಗೆಯನ್ನು ಅಡಗಿಸುವ ಕಾರ್ಯದಲ್ಲಿ ಹಾಗೂ ನಂತರ ನಡೆದ ಮರಾಠಾ ದಂಡಯಾತ್ರೆಯಲ್ಲಿ ಮುಖ್ಯ ಸೇನಾಧಿಪತಿಯೂ ಆಗಿ ಭಾಗಿಯಾಗಿದ್ದನು. ಆದರೆ, ಕೊನೆಗಾಲದಲ್ಲಿ ಅವನು ಅಗಾಧ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಅಕ್ಬರನ ಮಗ ಜಹಾಂಗೀರ್ ರಹೀಮನನ್ನು